ಜನತಾ ಮಾಧ್ಯಮ

12-02-2018 ಸೋಮವಾರ ಪುಟ-2

ಹವಾಮಾನ

ಭಾನುವಾರ ಗರಿಷ್ಠ ಉಷ್ಣಾಂಶ 28.2°, ಕನಿಷ್ಠ 20.2° ತೇವಾಂಶ:0.0°

ರೈಲ್ವೆಯಲ್ಲಿ 62,907 ಹುದ್ದೆಗಳಿಗೆ ಅರ್ಜಿ ಆಹ್ವಾನ

ನವದೆಹಲಿ: ಭಾರತೀಯ ರೈಲ್ವೆ ಇಲಾಖೆ ಅತಿ ದೊಡ್ಡ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿದೆ. ಖಾಲಿ ಇರುವ 62,907 ಡಿ ಗ್ರೂಪ್ ಹುದ್ದೆಗಳಿಗೆ ರೈಲ್ವೆ ಇಲಾಖೆ ಅರ್ಜಿ ಆಹ್ವಾನಿಸಿದೆ. 62,907 ಡಿ ಗ್ರೂಪ್ ಹುದ್ದೆಗಳಿಗೆ ಬೆಳಿಗ್ಗೆ 10 ಗಂಟೆಯಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಅರ್ಜಿ ಸಲ್ಲಿಸಲು ಮಾರ್ಚ್ 12 ಕೊನೆಯ ದಿನಾಂಕವಾಗಿದೆ. ರೈಲ್ವೆ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 10ನೇ ತರಗತಿ ಅಥವಾ ಐಟಿಐ ಪಾಸ್ ಆಗಿರಬೇಕು. ವಯಸ್ಸು ಕನಿಷ್ಟ 18 ಹಾಗೂ ಗರಿಷ್ಟ 31ರ ಒಳಗಿರಬೇಕು. 18 ಸಾವಿರ ರೂಪಾಯಿ ಸಂಬಳ: ಹುದ್ದೆಗಳಿಗೆ ನೇಮಕವಾದ ಅಭ್ಯರ್ಥಿಗಳಿಗೆ ತಿಂಗಳ 18 ಸಾವಿರ ರೂಪಾಯಿ ವೇತನ ಜೊತೆಗೆ 7ನೇ ವೇತನ ಆಯೋಗದ ಅನ್ವಯ ಭತ್ಯೆ ಸಿಗಲಿದೆ.

ಅಬುದಾಬಿಯಲ್ಲಿ ಮೊದಲ ಹಿಂದೂ ದೇವಾಲಯ... ಶಿಲಾನ್ಯಾಸ ನೆರವೇರಿಸಿದ ಮೋದಿ

ಅಬುದಾಬಿ: ಯುಎಇ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಇಂದು ಅಬುದಾಬಿಯಲ್ಲಿ ಮೊದಲ ಹಿಂದೂ ದೇವಾಲಯ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಿದರು. ಭಾರತೀಯ ಮೂಲದ 30 ಲಕ್ಷಕ್ಕೂ ಅಧಿಕ ಜನರು ವಾಸಿಸುತ್ತಿರುವ ದುಬೈ-ಅಬುದಾಬಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಹಿಂದೂ ದೇವಾಲಯ ನಿರ್ಮಿಸಲಾಗುತ್ತಿದೆ. ಬೋಚಸನವಾಸಿ ಅಕ್ಷರ್ ಪುರುಷೋತ್ತಮ ಸ್ವಾಮಿ ನಾರಾಯಣ ಸಂತ್ ದೇವಾಲಯ ಯೋಜನೆಗೆ ಮೋದಿ ಶಿಲಾನ್ಯಾಸ ನೆರವೇರಿಸಿದರು. ಬಳಿಕ ಭಾರತೀಯ ಸಮುದಾಯಗಳನ್ನು ಉದ್ದೇಶಿಸಿ ನರೇಂದ್ರ ಮೋದಿ ದುಬೈನಲ್ಲಿ ಭಾಷಣ ಮಾಡಿದರು. ದೇವಾಲಯ ನಿರ್ಮಾಣ ಮಾಡುತ್ತಿರುವುದಕ್ಕೆ ಭಾರತೀಯರ ಪರವಾಗಿ ದುಬೈ ಪ್ರಿನ್ಸ್‌ಗೆ ಮೋದಿ ಧನ್ಯವಾದ ತಿಳಿಸಿದ್ದಾರೆ. ಹಾಗೆಯೇ ಭಾರತೀಯರಿಗೆ ಉತ್ತಮ ವಾತಾವರಣ ನಿರ್ಮಿಸಿಕೊಟ್ಟ ಗಲ್ಫ್ ದೇಶಗಳಿಗೆ ಪ್ರಧಾನಿ ಧನ್ಯವಾದ ಹೇಳಿದ್ದಾರೆ.

ಶ್ರವಣಬೆಳಗೊಳ ಚಿಕ್ಕ ಬೆಟ್ಟದ ಮೇಲೆ ಚಾವುಂಡರಾಯ- ರನ್ನನ ಹಸ್ತಾಕ್ಷರ

ನಂದನ್‌ಪುಟ್ಟಣ್ಣ



ಶ್ರವಣಬೆಳಗೊಳ : ಕವಿ ರನ್ನನಿಗೆ ಆಶ್ರಯ ನೀಡಿ ಭವಿಷ್ಯಕ್ಕೆ ತಿರುವು ನೀಡಿದ ಹಿರಿಮೆ ಜೈನ ಕಾಶಿ ಶ್ರವಣಬೆಳಗೊಳಕ್ಕೆ ಸಿಕ್ಕರೇ ಕನ್ನಡ ಭಾಷೆ ಹಾಗೂ ಕನ್ನಡ ಜೈನ ಸಾಹಿತ್ಯಕ್ಕೆ ಜೀವಸತ್ವ ತುಂಬಿದ ಹೆಗ್ಗಳಿಕೆ ಕವಿ ರನ್ನನಿಗೆ ಸಲ್ಲುತ್ತದೆ, ರನ್ನ ಎಂಬ ಹೆಸರು ಕೇಳುತ್ತಿದ್ದಂತೆ ಶೈಕ್ಷಣಿಕ ಹಂತದಲ್ಲಿ ಪದ್ಯ ಹಾಗೂ ಗದ್ಯ ಭಾಗಗಳಲ್ಲಿ ಇವರ ಪರಿಚಯದ ಸಾಲುಗಳನ್ನು ಓದಿದ ನೆನಪಾಗುತ್ತದೆ.

ಜೈನಕಾಶಿ ಶ್ರವಣಬೆಳಗೊಳಕ್ಕೆ ವಿದ್ಯೆ ಹರಸಿ ಬಂದ ರನ್ನ ಹಲವು ವರ್ಷಗಳ ಕಾಲ ಇಲ್ಲೇ ನೆಲೆ ನಿಂತು ಕವಿಯಾಗಿ ಅಖಂಡ ಸಾಧನೆಯನ್ನೇ ಮಾಡಿದ್ದು, ಜೈನಕಾಶಿ ಶ್ರವಣಬೆಳಗೊಳಕ್ಕೆ ತನ್ನದೇ ಆದ ಅಪಾರ ಕೊಡುಗೆ ನೀಡುತ್ತಾನೆ, ಇದಕ್ಕೆ ಚಿಕ್ಕಬೆಟ್ಟದಲ್ಲಿ ಶಾಸನಗಳು ಹಾಗೂ ರನ್ನ ಕವಿಯ ಹಸ್ತಾಕ್ಷರಗಳು ಇಂದಿಗೂ ಸಾಕ್ಷಿ ಯಾಗಿವೆ.

ಕ್ರಿ.ಶ. 9 ನೇ (992ರಲ್ಲಿ) ಶತಮಾನದಲ್ಲಿ ಬಾಗಲಕೋಟೆ ಜಿಲ್ಲೆಯ ಈಗಿನ ಮುಧೋಳ ತಾಲ್ಲೂಕಿನ ಬೆಳಗಲಿ (ರನ್ನ ಬೆಳಗಲಿ) ಎಂಬ ಗ್ರಾಮದಲ್ಲಿ ಜೈನ ಸಮುದಾಯದ ಜಿನ ವಲ್ಲಭ (ತಂದೆ) ಹಾಗೂ ಅಬ್ಬಲಬ್ಬೆ (ತಾಯಿ) ಎಂಬ ದಂಪತಿಗಳ ಮೂರನೇಯ ಮಗನಾಗಿ ರನ್ನ ಜನಿಸುತ್ತಾನೆ, ರನ್ನನಿಗೆ ರೇಚಣ ಹಾಗೂ ಮಾರಮ್ಮಯ್ಯ ಎಂಬ ಇಬ್ಬರು ಅಣ್ಣಂದಿರು ಇರುತ್ತಾರೆ.

ಈ ಕುಟುಂಬವು ಬಡತನ ಹೊರೆಯಲು ವಂಶ ಪರಂಪರೆಯಾಗಿ ಬಳೆ ಮಾರಾಟವನ್ನೇ ತಮ್ಮ ಕಸುಬು ಅಥವಾ ವೃತ್ತಿಯಾಗಿಸಿಕೊಂಡಿತ್ತು, ವೃತ್ತಿಯಲ್ಲಿ ಬಳೆಗಾರರಾದರೂ ಅಪಾರ ವಿದ್ಯೆ ಕಲಿಯಬೇಕೆಂಬುದು ರನ್ನನ ಮಹದಾಸೆಯಾಗಿತ್ತು, ಆದರೆ ಬಡತನ ಅಡ್ಡಿಯಾಗಿತ್ತು ಎನ್ನಲಾಗಿದೆ.

ಆದರೂ ಛಲ ಬಿಡದ ರನ್ನನು ಹಾವೇರಿ ಜಿಲ್ಲೆಯ ಬಂಕಾಪುರದ ಜೈನ ಗುರುಕುಲಕ್ಕೆ ಆಗಮಿಸಿ ಗುರುಗಳ ಬಳಿ ವಿದ್ಯೆ ಗಳಿಸಬೇಕು ಎಂಬ ತನ್ನ ಮಹದಾಸೆಯನ್ನು ಬಿಚ್ಚಿಡುತ್ತಾನೆ, ಆದರೆ ಆ ಗುರುಗಳು ರನ್ನ ಅವರ ಕುಟುಂಬದ ವೃತ್ತಿ ಹಾಗೂ ಬಡತನದ ಹಿನ್ನೆಲೆ ವಿಚಾರಿಸಿಕೊಂಡು, ತಂದು, ಹೊತ್ತು ಮಾರಿ ಲಾಭ ಗಳಿಸಲು ವಿದ್ಯೆಯೇನು ಬಳೆಯ ಮಲಾರವೇ ಎಂದು ಅಪಹಾಸ್ಯ ಮಾಡಿ ನಕ್ಕರಂತೆ.

ಆದರೆ ಗುರುಗಳ ಮಾತಿಗೆ ಬೇಸರಗೊಳ್ಳದ ರನ್ನ ವೃತ್ತಿ ಹೊಟ್ಟೆಪಾಡಿಗೆ, ಆಗೆಯೇ ವಿದ್ಯೆ ನನ್ನ ಆತ್ಮದ ಹಸಿವನ್ನು ಹಿಂಗಿಸಲಿಕ್ಕೆ ಎಂದು ವಿವೇಕದಿಂದಲೇ ಉತ್ತರ ನೀಡಿ ಅಲ್ಲಿಂದ ವಿದ್ಯೆಯನ್ನು ಹರಸುತ್ತಾ ಮುನ್ನಡೆಯುತ್ತಾನೆ, ಅಷ್ಟರಲ್ಲಿ ಅಜಿತ ಸೇನಾಚಾರ್ಯರ ಶಿಷ್ಯ ಲಲಿತಕೀರ್ತಿ ರನ್ನನಿಗೆ ಎದುರಾಗಿ ಸಿಕ್ಕರು, ಶ್ರವಣಬೆಳಗೊಳದ ಗಂಗರಾಜನ ಆಶ್ರಯದಲ್ಲಿದ್ದು, ಅಜಿತ ಸೇನಾಚಾರ್ಯರಿಂದ ವಿದ್ಯೆ ಕಲಿತಿರುವ ಲಲಿತಕೀತಿಯವರು ರನ್ನನ ವಿದ್ಯೆ ಕಲಿಯಬೇಕೆಂಬ ಹಂಬಲವನ್ನು ತಿಳಿದು ಆಶ್ಚರ್ಯಪಟ್ಟರು.

ನಂತರ ನೀನು ಶ್ರವಣಬೆಳಗೊಳಕ್ಕೆ ಹೋಗು, ಅಲ್ಲಿ ಚಾವುಂಡರಾಯರ ರಾಜಾಶ್ರಯದಲ್ಲಿ ಅಜಿತ ಸೇನಾಚಾರ್ಯ ಗುರುಗಳಿದ್ದಾರೆ, ಅಲ್ಲಿ ನಿನ್ನ ಹಂಬಲ ತಿಳಿಸು, ಆದರೆ ಅವರು ನಿನಗೆ ಆಶ್ರಯ ಹಾಗೂ ವಿದ್ಯೆ ನೀಡುತ್ತಾರೆಂಬುದು ನನಗೆ ಗೊತ್ತಿಲ್ಲ, ಅಂದುಕೊಂಡಂತೆ ಸಿಕ್ಕರೆ ನಿನ್ನ ಪೂರ್ವ ಜನದ ಫಲ ಎಂದು ಹೇಳುತ್ತಾರೆ.

ತಕ್ಷಣ ರನ್ನ ಅಲ್ಲಿಂದ ಶ್ರವಣಬೆಳಗೊಳಕ್ಕೆ ಆಗಮಿಸಿ ಚಾವುಂಡರಾಯನನ್ನು ಭೇಟಿ ಮಾಡಿ ನನ್ನ ಹಾಗೂ ವಿದ್ಯೆ ಕಳಿಯುವ ಬಗ್ಗೆ ಹೇಳಿಕೊಳ್ಳುತ್ತಾರೆ, ರನ್ನನ ಶ್ರದ್ದೆ, ಭಕ್ತಿ, ವಿದ್ಯೆ ಮೇಲಿನ ಅಪಾರ ಗೌರವ ಹಾಗೂ ಅದ್ಮುಕ್ತ ಆಸಕ್ತಿ ಕಂಡ ಚಾವುಂಡರಾಯನು ಆಶ್ರಯ ನೀಡಿ, ಅಜಿತ ಸೇನಾಚಾರ್ಯರ ಬಳಿ ಕರೆದೊಯ್ಯುತ್ತಾರೆ.

ರನ್ನರ ಬಹು ದಿನಗಳ ಕನಸ್ಸಾಗಿದ್ದ ವಿದ್ಯೆ ಕಲಿಯುವ ಮಹದಾಸೆಗೆ ಇಲ್ಲಿ ಅಸ್ತು ಸಿಕ್ಕುವ ಮೂಲಕ ಇಲ್ಲಿಂದ ರನ್ನನ ಹೊಸ ಜೀವನ ಆರಂಭವಾಗುತ್ತದೆ, ಅಜಿತ ಸೇನಾಚಾರ್ಯ ರಿಂದ ಕನ್ನಡ, ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳಲ್ಲಿ ಅಪಾರವಾದ ವಿದ್ಯೆ ಗಳಿತಿದ್ದು, ಇಲ್ಲಿಂದ ಅವರ ಕೃತಿ-ಪಾಂಡಿತ್ಯ ಪರಾಕ್ರಮವು ಬೆಳೆಯುತ್ತಾ ಹೋಗುತ್ತದೆ.

ಅಜಿತ ತೀರ್ಥಂಕರ ಪುರಾಣ, ಚಕ್ರೇಶ್ವರ ಚರಿತೆ, ಸಾಹಸ ಭೀಮಾ ವಿಜಯ, ಪರುಶರಾಮ ಚರಿತೆ, ರನ್ನಕಂದ ಎಂಬ ಕೃತಿಗಳ ಜತೆಗೆ ಕನ್ನಡದ ಮೊದಲ ನಿಘಂಟನ್ನು ರಚಿಸುತ್ತಾರೆ, ರನ್ನಕಂದ ಕೃತಿಯಲ್ಲಿ 12 ಕಂದ ಪದ್ಯಗಳ ಸಂಗ್ರಹವಿದೆ, ಆದರೆ 2 ಕೃತಿಗಳ ಜತೆಗೆ ನಿಘಂಟು ಉಪ ಲಬ್ದವಾಗಿದೆ.

ರನ್ನ ತಾನು ಕಲಿತ ವಿದ್ಯೆಯನ್ನು ರಾಜ್ಯ ವ್ಯಾಪ್ತಿಯ ಹಲವು ವೇದಿಕೆಗಳಲ್ಲಿ ಪ್ರದರ್ಶನಗೊಳಿಸುತ್ತಾನೆ, ಅವರ ಕೃತಿ ಹಾಗೂ ಕಂದಗಳ ವರ್ಣನೆಯ ಪ್ರಭಾವದಿಂದ ಅವರಿಗೆ ಕವಿ ಚಕ್ರವರ್ತಿ, ಕವಿರತ್ನ, ಅಭಿನವ ಚಕ್ರವರ್ತಿ ಹಾಗೂ ಉಭಯಕವಿ ಎಂಬ ಬಿರುದುಗಳು ಸಿಗುತ್ತವೆ.

ಇಷ್ಟರಲ್ಲಾಗಲೇ ಚಾವುಂಡರಾಯ ಹಾಗೂ ರನ್ನ ಇಬ್ಬರ ನಡುವೆ ಅಪಾರವಾದ ಪ್ರೀತಿ, ವಿಶ್ವಾಸ ಹಾಗೂ ಗೌರವ ಬೆಳೆದಿದ್ದು, ಆ ಒಂದು ನೆನಪಿಗಾಗಿ ಚಿಕ್ಕ ಬೆಟ್ಟದ ಮೇಲೆ ಈ ಇಬ್ಬರೂ ಸೇರಿ ತಮ್ಮ ಕೈಯಿಂದ ವಿವಿಧ ವಿಚಾರಗಳನ್ನು ಅಕ್ಷರ ರೂಪದಲ್ಲಿ ಕಲ್ಲಿನ ಮೇಲೆ ಬರೆಯುತ್ತಾರೆ, (ಚಿಕ್ಕಬೆಟ್ಟದ ಮೇಲೆ ಈಗಲೂ ಈ ಇಬ್ಬರ 10 ನೇ ಶತಮಾನದ ಕಾಲಘಟ್ಟಕ್ಕೆ ಸೇರಿದ ಹಸ್ತಾಕ್ಷರಗಳನ್ನು ಕಣ್ತುಂಬಿಕೊಳ್ಳಬಹುದಾಗಿದೆ).

ಊರಿನತ್ತ ರನ್ನನ ಚಿತ್ತ: ಎಲ್ಲ ವಿದ್ಯೆ ಪಾಂಡಿತ್ಯವನ್ನು ಕಲಿತು ನಾಡಿನ ಉದ್ದಗಲಕ್ಕೂ ಪ್ರದರ್ಶಿಸಿದ ರನ್ನನಿಗೆ ಅಂತಿಮವಾಗಿ ಹುಟ್ಟೂರಾದ ಬೆಳಗಲಿ ಗ್ರಾಮಕ್ಕೆ ಹೊರಡಬೇಕು ಎಂಬ ಹಂಬಲ ಕಾಡುತ್ತದೆ, ಚಾವುಂಡರಾಯ ಹಾಗೂ ಗುರುಗಳಾದ ಅಜಿತಸೇನಾ ಚಾರ್ಯರಿಗೆ ನಮಿಸಿ ಸೀದಾ ಬೆಳಗಲಿ ಗ್ರಾಮಕ್ಕೆ ವಾಪಸ್ಸಾಗುತ್ತಾನೆ.

ಗ್ರಾಮದಲ್ಲಿ ರನ್ನನ ಗುಣಗಾನ: ರನ್ನ ಜನಿಸಿದ ಬೆಳಗಲಿ ಗ್ರಾಮವನ್ನು ಅವರ ಕವಿ ಪಾಂಡಿತ್ಯದ ಪ್ರಬಾವದಿಂದ ರನ್ನ ಬೆಳಗಲಿ ಎಂದು ಈಗಲೂ ಕರೆಯಲಾಗುತ್ತದೆ, ಗ್ರಾಮದಲ್ಲಿರುವ ಗ್ರಂಥಾಲಯ, ಕ್ರೀಡಾಂಗಣ, ಸಮುದಾಯ ಭವನ, ಕಾರ್ಯಕ್ರಮಗಳ ವೇದಿಕೆ ಹಾಗೂ ಇತರೆ ಕಟ್ಟಡಗಳಿಗೆ ರನ್ನರ ಹೆಸರೇ ಬಳಕೆಯಾಗುವುದು ಒಂದು ವಿಶೇಷ.

ಆಗೆಂದ ಮಾತ್ರಕ್ಕೆ ರನ್ನ ತನ್ನ ವಿದ್ಯೆ ಮರೆತು ಕೃತಿ ರಚಿಸುವುದನ್ನು ನಿಲ್ಲಿಸುವುದಿಲ್ಲ, ಚಾಲುಕ್ಯರ ಆಶ್ರಯದಲ್ಲಿದ್ದ ಅತ್ತಿಮಬ್ಬೆ ಅವರ ಜತೆ ಸೇರಿ ಅನೇಕ ಕೃತಿಗಳ ರಚನೆ ಕಾರ್ಯದಲ್ಲಿ ತೊಡಗುತ್ತಾರೆ, ನಂತರದ ಅದೆಷ್ಟೋ ವರ್ಷಗಳ ಬಳಿಕ ಶ್ರವಣಬೆಳಗೊಳದಲ್ಲಿ ನಡೆದ ಮಹಾಮಸ್ತಕಾಭಿಷೇಕ ಮಹೋತ್ಸವಕ್ಕೆ ಅತ್ತಿಮಬ್ಬೆ ಅವರ ಜತೆ ರನ್ನ ಆಗಮಿಸಿ ಪಾಲ್ಗೊಳ್ಳುತ್ತಾನೆ.

ಅಂದಿನ ಮಹಾ ಮಸ್ತಕಾಭಿಷೇಕ ಮಹೋತ್ಸವದಲ್ಲಿ ಚಾವುಂಡರಾಯ, ಜೈನ ಮಹಾಗುರು ಅಜಿತಸೇನಾಚಾರ್ಯ ಅವರ ಜತೆ ಅತ್ತಿಮಬ್ಬೆ ಹಾಗೂ ರನ್ನ ಪಾಲ್ಗೊಂಡಿದ್ದು, ವೈಭವದ ಮಹೋತ್ಸವವು ಎಂದು ಮರೆಯಲಾಗದ ಒಂದು ಇತಿಹಾಸವಾಗಿ ಉಳಿಯುತ್ತದೆ.

ಹೆಚ್.ಸಿ. ಕೌಶಿಕ್‌ಗೆ ಕನ್ನಡ ಭಾಷಾ ಮಾಧ್ಯಮ ಪ್ರಶಸ್ತಿ

ಬೇಲೂರು: ತಾಲ್ಲೂಕಿನ ಹಳೇಬೀಡಿನ ಹೊಯ್ಸಳ ಪ್ರೌಢಶಾಲೆಯ ವಿದ್ಯಾರ್ಥಿ ಹೆಚ್.ಸಿ. ಕೌಶಿಕ್ ಅವರಿಗೆ ರಾಜ್ಯ ಸರ್ಕಾರದ ಕನ್ನಡ ಅಭಿವೃದ್ದಿ ಪ್ರಾಧಿಕಾರ ನೀಡುವ 'ಕನ್ನಡ ಭಾಷಾ ಮಾಧ್ಯಮ ಪ್ರಶಸ್ತಿ' ಲಭಿಸಿದೆ.

ಕಳೆದ 2016-17ನೇ ಸಾಲಿನ ಹತ್ತನೆ ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಹೆಚ್ಚು ಅಂಕ ಪಡೆದು ತಾಲ್ಲೂಕಿಗೆ ಮೊದಲಿಗನಾಗಿ ಹೆಚ್.ಸಿ.ಕೌಶಿಕ್ ಉತ್ತೀರ್ಣ ನಾಗಿದ್ದರು. ರಾಜ್ಯ ಮಟ್ಟದಲ್ಲಿ ಪ್ರಶಸ್ತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭ ಹಳೆಬೀಡಿನ ಹೊಯ್ಸಳ ಶಾಲೆಯ ಈ ವಿದ್ಯಾರ್ಥಿ ಸೇರ್ಪಡೆಯಾಗಿದ್ದಾರೆ. ಫೆಬ್ರವರಿ 25 ರಂದು ಚಿಕ್ಕಮಗಳೂರಿನ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ಸಭಾಂಗಣ ದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 12 ಸಾವಿರ ನಗದಿನೊಂದಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಈ ಬಗ್ಗೆ ಹಳೇಬೀಡಿನ ಹೊಯ್ಸಳ ಶಾಲೆಗೆ ಹಾಗೂ ಸಂಬಂಧಪಟ್ಟ ವಿದ್ಯಾರ್ಥಿಗೆ ಪತ್ರ ಬರೆದು ತಿಳಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿ ಧರ್ ಅವರು, ಕನ್ನಡ ಭಾಷೆ ಪ್ರೋತ್ಸಾಹಿಸುವ ದೃಷ್ಠಿಯಿಂದ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗುವ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುತ್ತಿದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿ ಹೆಚ್ಚು ಅಂಕ ಪಡೆದು ಉತ್ತೀರ್ಣನಾಗಿದ್ದಕ್ಕೆ ಶಿಕ್ಷಕರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಹಳ್ಳಿಗಳ ಉದ್ದಾರಕ್ಕೆ ಸುಶಿಕ್ಷಿತರ ಸಹಭಾಗಿತ್ವ ಅಗತ್ಯ

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಯಾಳನಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಸೇವಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯ ನಾಗನಹಳ್ಳಿ ಮಂಜಣ್ಣ ಭಾಗವಹಿಸಿ ಮಾತನಾಡಿ, ಹಳ್ಳಿಗಳ ಉದ್ದಾರವಾಗಬೇಕಾದರೆ ಸುಶಿಕ್ಷಿತ ಸಮುದಾಯದ ಸಹಭಾಗಿತ್ವ ಅನಿವಾರ್ಯ ಮತ್ತು ರೈತ ಸಂತತಿಯ ಹಲವು ಸಮಸ್ಯೆಗಳ ಪರಿಹಾರಕ್ಕೆ ಸಮಾಜದ ಎಲ್ಲ ವರ್ಗದ ಜನರು ಟೊಂಕಕಟ್ಟಿ ನಿಲ್ಲಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಹೆಚ್.ಎನ್. ಬಸವರಾಜು ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವವನ್ನು ವಿವರಿಸುತ್ತಾ, ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ರಾಷ್ಟ್ರೀಯ ಸೇವಾ ಯೋಜ ನೆಯ ಪಾತ್ರವನ್ನು ವಿದ್ಯಾರ್ಥಿಗಳಿಗೆ ಹೇಳಿದರು.

ಕಾರ್ಯಕ್ರಮದಲ್ಲಿ ಸ್ಕೌಟ್ ಅಂಡ್ ಗೈಡ್ಸ್ ಮುಖ್ಯಸ್ಥ ಹೆಚ್.ಎಂ.ಗೌಡಯ್ಯ, ಸಾಹಿತಿಗಳಾದ ಬಾವಿಮನೆ ಚಂದ್ರಶೇಖರ್, ಬ್ರಹ್ಮ ಕುಮಾರಿ ಸಮಾಜದ ಸದಸ್ಯರುಗಳು ಮತ್ತು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕಿರಣ್ ಕುಮಾರ್ ಪಿ ಎನ್, ಗೋಪಾಲ ಕೆ ಆರ್, ಶಿಬಿರಾಧಿಕಾರಿ ಶ್ರೀನಿವಾಸಗೌಡ ಕೆ ಎಂ, ಮತ್ತು ಸಹಶಿಬಿರಾಧಿಕಾರಿ ' ಲತಾಎಲ್ ಮುಂತಾದವರು ಉಪಸ್ಥಿತರಿದ್ದರು.

ಶ್ರೀ ಬೂದೇಶ್ವರಸ್ವಾಮಿ ಜಾತ್ರಾ ಮಹೋತ್ಸವ

ಹಾಸನ: ಹಾಸನ ತಾಲ್ಲೂಕು ನಿಟ್ಟೂರು ಅಂಚೆ ಬಿಡಾರದಹಳ್ಳಿಯಲ್ಲಿ ಫೆ. 13 ರಿಂದ 15ರವರೆಗೆ ಶ್ರೀ ಗುರು ಬೂದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ.

ಫೆ. 13 ರ ಬೆಳಿಗ್ಗೆ 7 ಗಂಟೆಗೆ ಧರ್ಮಧ್ವಜ ಸ್ಥಾಪನೆ, ಗಂಗಾ ಪೂಜೆ, ಗಣಪತಿ ಹೋಮ, 9 ಗಂಟೆಗೆ ಅಖಂಡ ಭಜನಾ ಕಾರ್ಯಕ್ರಮ ಕೆ.ಎಸ್. ಸುಧಾಮಣಿ ಅವರಿಂದ ಸುಗಮ ಸಂಗೀತ, ಮಂಜು ಮತ್ತು ಅವರ ತಂಡದಿಂದ ತೊಗಲು ಗೊಂಬೆ ಮೇಳ, ಕು. ಸೀಮಾ ನಾರಾ ಯಣ್ ಮತ್ತು ಕು. ಅನನ್ಯ ಭರತನಾಟ್ಯ, ರಾತ್ರಿ 8 ಗಂಟೆಗೆ ದೊಡ್ಡಹಳ್ಳಿ ರಮೇಶ್ ಮತ್ತು ತಂಡದಿಂದ ಜಾನಪದ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಫೆ. 14 ರ ಬೆಳಿಗ್ಗೆ 9 ಗಂಟೆಗೆ ರುದ್ರಾಭಿಷೇಕ, ಸಂಜೆ 5 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಯುವ ಸೌರಭ ಕಾರ್ಯಕ್ರಮ, ಶ್ರೀ ತೋಟ ದೇಶ್ವರ ಸ್ವಾಮಿಯ ಆನೆಅಂಬಾರಿ ಉತ್ಸವ, ಸಂಜೆ 7 ಗಂಟೆಗೆ ಚಿತ್ರಪಟ ರಾಮಾಯಣ ನಾಟಕ, ರಾತ್ರಿ 10 ಗಂಟೆಗೆ ರಾಜ ಸತ್ಯವ್ರತ ಅಥವಾ ಶನಿಪ್ರಭಾವ ಪೌರಾಣಿಕ ನಾಟಕ ನಡೆಯಲಿದೆ.

ಫೆ.12:ಜೆಡಿಎಸ್ ಚುನಾವಣಾ ಪ್ರಚಾರ ಸಭೆ

ಬೇಲೂರು : ಬೇಲೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ ಚುನಾವಣಾ ಪ್ರಚಾರ ಸಭೆಯನ್ನು ಫೆ.12ರಂದು ಆಯೋಜಿಸಲಾಗಿದೆ ಎಂದು ತಾಲ್ಲೂಕು ಜೆಡಿಎಸ್ ಅಧ್ಯಕ್ಷ ತೊ.ಚ.ಅನಂತಸುಬ್ಬರಾಯ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುವ ಅವರು ಪಟ್ಟಣದ ಶ್ರೀಚನ್ನಕೇಶವ ದೇವಾಲಯದ ಮುಂಭಾಗದ ಕೋಟೆ ಬಯಲು ರಂಗ ಮಂದಿರದ ಆವರಣದಲ್ಲಿ ಕ್ಷೇತ್ರದ ಜೆಡಿಎಸ್ ಪಕ್ಷದ ಪ್ರಚಾರ ಸಭೆ ಹಾಗೂ ಕಾರ್ಯಕರ್ತರ ಸಭೆಯನ್ನು ಮಧ್ಯಾಹ್ನ 12.30ಕ್ಕೆ ಕರೆಯಲಾಗಿದ್ದು, ಈ ಸಭೆಗೆ ಪಕ್ಷದ ವರಿಷ್ಟ ಹೆಚ್.ಡಿ.ದೇವೇಗೌಡ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಭಾಗವಹಿಸಲಿದ್ದು, ಜೆಡಿಎಸ್ ಪಕ್ಷದ ಕಾರ್ಯಕರ್ತರು ಹಾಗೂ ಚುನಾಯಿತ ಪ್ರತಿನಿಧಿಗಳು ಹಾಗೂ ಪಕ್ಷದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಹಿಸುವಂತೆ ಮನವಿ ಮಾಡಿದ್ದಾರೆ.

ಪ್ರಶಸ್ತಿ ಪ್ರದಾನ

ಹಾಸನ:2016-17 ನೇ ಸಾಲಿನಲ್ಲಿ ನಡೆದ ಕೃಷಿ ವಿಜ್ಞಾನದ ಪದವಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿ ಕಾರೆಕೆರೆಕಾವಲು ಕೃಷಿ ಕಾಲೇಜು ವಿದ್ಯಾರ್ಥಿನಿ ಅನುಷಾ ಕಾಂಚನ್ ಚಿನ್ನದ ಪದಕ ವಿಜೇತರಾಗಿದ್ದು ಅವರನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 52ನೇ ಘಟಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಈಕೆ ಹಳೇಬೀಡಿನ ಮಹೇಶ್ ಹೆಚ್.ಎನ್. ಹಾಗೂ ವೀಣಾ ಹೆಚ್.ಎಂ. ಅವರ ಪುತ್ರಿ

ಸ್ಕೌಟ್ಸ್ ಗೈಡ್ಸ್ ಸಂಸ್ಥೆಗೆ ಮಸ್ತಕಾಭಿಷೇಕದ ಸೇವೆ ಅತ್ಯಮೂಲ್ಯ

ಶ್ರವಣಬೆಳಗೊಳ : ಜಾತಿ, ಮತ, ಧರ್ಮದೆಲ್ಲೆ ಮೀರಿದ ಹಾಗೂ ಯುವಕರಿಗೆ ಅವರ ಶ್ರೇಯೋಭಿವೃದ್ದಿಗೆ ಜನ್ಮ ತಾಳಿದ ಏಕೈಕ ಜಾಗತಿಕ ಸಂಘಟನೆ ಭಾರತ್ ಸ್ಕೌಟ್ಸ್ ಗೈಡ್ಸ್ ಆಗಿದೆ. ನಮ್ಮ ಸಂಸ್ಥೆಗೆ 2018 ರ ಮಹಾ ಮಸ್ತಕಾಭಿಷೇಕ ಸೇವಾಮನೋಭಾವದ ದೃಷ್ಠಿಯಿಂದ ಅತ್ಯಮೂಲ್ಯ ಹಾಗೂ ಮಹತ್ವದ್ದಾಗಿದೆ ಎಂದು ರಾಜ್ಯ ಸಂಘಟನಾ ಆಯುಕ್ತ ಪ್ರಭಾಕರ ಭಟ್ ಅಭಿಪ್ರಾಯಪಟ್ಟರು.

ಅವರು ಮಹಾಮಸ್ತಕಾಭಿಷೇಕ-2018 ರ ಅಂಗವಾಗಿ ದಿ ಭಾರತ್ ಸ್ಕೌಟ್ಸ್ ಗೈಡ್ಸ್ ಕರ್ನಾ ಟಕ ಫೆಬ್ರವರಿ 04 ರಿಂದ ಮಾರ್ಚ್ 03 ರವರೆಗೆ ಒಂದು ತಿಂಗಳ ಕಾಲ ಹಮ್ಮಿಕೊಂಡಿ ರುವ ರಾಷ್ಟ್ರಮಟ್ಟದ ಸೇವಾಶಿಬಿರದಲ್ಲಿ ಶಿಬಿ ರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ರೋವರ್ಸ್ ಹಾಗೂ ರೇಂಜರ್ಸ್‌ಗಳು ಪ್ರಭಾತ್ ಭೇರಿ, ವಿಂಧ್ಯಗಿರಿ, ಬೆಟ್ಟ, ಚಂದ್ರಗಿರಿ ಬೆಟ್ಟ, ಶ್ರೀಮಠ, 12 ಉಪನಗರಗಳು, ಭೋಜನಾಲಯಗಳು, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಆರೋಗ್ಯ ಕೇಂದ್ರಗಳು, ಸಭಾ ಮಂಟಪಗಳು ಸೇರಿದಂತೆ ಹಲವಾರು ಸ್ಥಳಗಳಲ್ಲಿ ಬೆಳಗ್ಗೆ 5.30 ರಿಂದ ಸಂಜೆ 08 ಗಂಟೆಯವರೆಗೆ ಸೇವಾ ಕಾರ್ಯದಲ್ಲಿ ತೊಡಗಿದ್ದಾರೆ. ಸಾರ್ವಜನಿಕರಿಂದ ಸಂಸ್ಥೆಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ಮಾಧ್ಯಮಗಳು ನಮ್ಮ ಮಕ್ಕಳ ಕಾರ್ಯಗಳನ್ನು ಪ್ರಸಾರ ಮಾಡುವ ಮೂಲಕ ನಮಗೆ ಇನ್ನೂ ಉತ್ತಮ ಕಾರ್ಯಕ್ಕೆ ಪ್ರೋತ್ಸಾಹಿಸುತ್ತಿವೆ. ಇವೆಲ್ಲವನ್ನು ಗಮನದಲ್ಲಿರಿಸಿ ಕೊಂಡು ನಾವುಗಳು ಸತ್ಕಾರ್ಯ ಮಾಡಬೇಕಿದೆ ಎಂದರು..

ಈ ಸಂದರ್ಭದಲ್ಲಿ ಗೈಡ್ ವಿಭಾಗದ ರಾಜ್ಯ ಸಂಘಟನಾ ಆಯುಕ್ತ ಎಸ್.ಮಂಜುಳ, ಹಿರಿಯ ರಾಜ್ಯ ಪದಾಧಿಕಾರಿ ಶಾಂತ, ಎ.ಎಸ್.ಓ.ಸಿ.ಗಳಾದ ಓಮ್ಮೇಶ್ವರಯ್ಯ, ಶಿವಕುಮಾರ್, ನಾಗೇಶ್ ಶಿವಪುರ, ಡಿ.ಓ.ಸಿ ಕೊಟ್ರೇಶ್ ಎಸ್.ಉಪ್ಪಾರ್, ಡಿ.ಓ.ಗಳಾದ ಭರತ್ ರಾಜ್ ಮಂಗಳೂರು, ಅಶೋಕ ಚಾಮರಾಜನಗರ, ಚಂದ್ರು ಮೈಸೂರು, ವಿಠ್ಠಲ್ ಬೆಳಗಾವಿ, ಹೊನ್ನಮ್ಮ ಬೆಂಗಳೂರು ಉತ್ತರ, ಭಾರತಿ ಡಯಾಸ್ ಶಿವಮೊಗ್ಗ, ರೇಣುಕ ಬಳ್ಳಾರಿ ಹಾಗೂ ರೋವರ್ಸ್ ಲೀಡರ್ಸ್‌ಗಳಾದ ಆರ್.ಜಿ. ಗಿರೀಶ್, ಕಬ್ ಮಾಸ್ಟರ್ ಲೋಕೇಶ್, ಘನಶ್ಯಾಂ ಗಿರಿ ಮಾಜಿ, ಪೃಥ್ವಿರಾಜ್ ಗಿರಿಮಾಜಿ, ಅಶೋಕ ಕುಮಾರ್ ಮುಂತಾದವರು ಹಾಜರಿದ್ದರು.

ಪತ್ತೆಗೆ ಸಹಕರಿಸಿ

ಹೊಳೆನರಸೀಪುರ: ತಾಲ್ಲೂಕಿನ ಹಳೇಕೋಟೆ ಹೋಬಳಿ, ಮಳಲಿ ಗ್ರಾಮದ ವಾಸಿ ಬಾಬು ಅವರ ಮಗಳು ಪವಿತ್ರ ಅವರು ಫೆ.5 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಶಾಂತಿ ಗ್ರಾಮಕ್ಕೆ ಹೋಗಿ ಬರುತೇನೆ ಎಂದು ಹೇಳಿ ಹೋದವರು ವಾಪಸ್ ಮನೆಗೆ ಬಾರದೆ ಕಾಣೆಯಾಗಿರುತ್ತಾರೆ. ಎಲ್ಲಾ ಕಡೆ ಹುಡುಕಿದರೂ ಪತ್ತೆಯಾಗಿರುವುದಿಲ್ಲ. ಪತ್ತೆ ಮಾಡಿ ಕೊಡಬೇಕು ಎಂದು ಪವಿತ್ರ ಅವರ ತಾಯಿ ಪಾರ್ವತಿ ಅವರು ಕೊಟ್ಟ ದೂರಿನ ಮೇರೆಗೆ ಹೊಳೆನರಸೀಪುರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಈ ಹೆಂಗಸಿನ ಸುಳಿವು ಸಿಕ್ಕಲ್ಲಿ 08175-73333 ಕ್ಕೆ ಸಂಪರ್ಕಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಿಳಿಸಿದ್ದಾರೆ.

★ ಆಲೂರು: ನೂತನವಾಗಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹೆಚ್.ಎಸ್.ಗಣೇಶ್ ನೇತೃತ್ವದಲ್ಲಿ ಫೆ. 12 ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಮಗ್ಗೆ ಜಿ.ಪಂ. ಅಭಿವೃದ್ಧಿ ಕಛೇರಿಯಲ್ಲಿ ಮುಂಬರುವ ಚುನಾ ವಣೆ ಹಾಗು ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಸಭೆ ಕರೆಯಲಾಗಿದ್ದು, ತಾಲ್ಲೂಕು ಕಾಂಗ್ರೆಸ್ ಪಕ್ಷದ ಎಲ್ಲ ಮುಖಂಡರು, ಗಣ್ಯರು, ಕಾರ್ಯರ್ತರ, ಕಾಂಗ್ರೆಸ್ ಪಕ್ಷದ ಚುನಾಯಿತ ಪ್ರತಿನಿಧಿಗಳು ಹಾಗು ಪಕ್ಷಾಭಿಮಾನಿಗಳು ಸಭೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆ ನೀಡಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಕೇಳಿಕೊಂಡಿದ್ದಾರೆ.

ಮಾಧ್ಯಮಗಳ ಹಾವಳಿ ರಂಗಭೂಮಿ ಕಣ್ಮರೆ-ವಿಷಾದ

ಬೇಲೂರು: ನಾಟಕ ಜೀವಂತ ಕಲೆಯಾಗಿದ್ದು, ಅದನ್ನು ಪೋಷಿಸಿ ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಸಾಹಿತಿ ಬೇಲೂರು ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಕೋಟೆ ಕನ್ನಿಕಾ ಪರಮೇಶ್ವರಿ ದೇವಾಲಯದ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರಿನ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕಲಾವೃಂದದಿಂದ ಚಲನಚಿತ್ರ ನಟ ದಿ.ರಾಜಾನಂದರ ನೆನಪಿನಲ್ಲಿ ಹುತ್ತಕ್ಕೆ ಕೈ ಹಾಕಿದ ಮುತ್ತೈದೆ ಎಂಬ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಇಂದು ವೃತ್ತಿ ರಂಗಭೂಮಿ ನಟರುಗಳು ಸಂಕಷ್ಟದಲ್ಲಿದ್ದಾರೆ. ಸಮಾಜ ಮತ್ತು ಸರ್ಕಾರ ಇವರ ಸಮಸ್ಯೆಗೆ ಸ್ಪಂದಿಸುವ ಅಗತ್ಯ ಇದೆ. ಟಿವಿ ಮಾಧ್ಯಮಗಳ ಹಾವಳಿಯಿಂದಾಗಿ ರಂಗ ಭೂಮಿ ನಾಟಕ ಕಲೆಗಳು ಕಣ್ಮರೆಯತ್ತ ಸಾಗುತ್ತಿವೆ. ಸಮಾಜವು ಈ ಜೀವಂತ ರಂಗ ಭೂಮಿ ಕಲೆಯನ್ನು ಮತ್ತು ಕಲಾವಿದರನ್ನು ಪ್ರೋತ್ಸಾಹಿಸಿ ಬೆಳಸಬೇಕು ಎಂದು ತಿಳಿಸಿದರು.

ನಂತರ ಮಾತನಾಡಿದ ನಿವೃತ್ತ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರಾಜೇಗೌಡ, ನಾಟಕ ಕಲೆಗಳ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಕಲಾವಿದರ ಸಂಘದ ಕಾರ್ಯದರ್ಶಿ ಮ.ಶಿವಮೂರ್ತಿ, ಉಮೇಶ್, ರಂಗಭೂಮಿ ಹಿರಿಯ ಕಲಾವಿದೆ ಬಿ.ಲೀಲಾವತಿ ಮತ್ತಿತರರಿದ್ದರು.

ಹುತ್ತಕ್ಕೆ ಕೈ ಹಾಕಿದ ಮುತ್ತೈದೆ ಎಂಬ ನಾಟಕವನ್ನು ಧರ್ಮಸ್ಥಳಕ್ಕೆ ತೆರಳುತಿದ್ದ ಪಾದಯಾತ್ರಿಗಳು, ಪಟ್ಟಣದ ನಾಗರಿಕರು ವೀಕ್ಷಿಸಿದರು.

ಶನೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ

ಹಾಸನ:ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿ ಬೆಳ್ಳಿಕೊಪ್ಪಲು ಗ್ರಾಮದಲ್ಲಿ 8ನೇ ವರ್ಷದ ಶ್ರೀ ಶನೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವು ಫೆ. 17 ರಂದು ನಡೆಯಲಿದೆ. ಅಂದು ಬೆಳಿಗ್ಗೆ 9 ಗಂಟೆಗೆ ಅಭಿಷೇಕ, 10ಕ್ಕೆ ಮೆರವಣಿಗೆ, 12.30ಕ್ಕೆ ಕಳಸ ತರುವುದು, ಮಧ್ಯಾಹ್ನ 2 ಗಂಟೆಗೆ ಕೆಂಡೋತ್ಸವ ಹಾಗು 3 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಿರುವುದಾಗಿ ಅರ್ಚಕ ಗಿಡ್ಡೇಗೌಡ ಸ್ವಾಮಿ ತಿಳಿಸಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಚಿವ ಹೆಚ್.ಡಿ. ರೇವಣ್ಣ ದೇವರಿಗೆ ಪುಷ್ಪಾರ್ಚನೆ ಮಾಡುವರು. ಜಿಲ್ಲಾ ಪಂಚಾಯತ್ ಸದಸ್ಯೆ ಭವಾನಿರೇವಣ್ಣ, ಜೆಡಿಎಸ್ ಯುವ ಮುಖಂಡ ಡಾ. ಸೂರಜ್ ರೇವಣ್ಣ, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯ ದರ್ಶಿ ಪ್ರಜ್ವಲ್ ರೇವಣ್ಣ, ಗೌರವಾನ್ವಿತ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮಾಜಿ ಸದಸ್ಯ ಪಟೇಲ್ ಶಿವರಾಂ, ಶಾಸಕ ಹೆಚ್.ಎಸ್. ಪ್ರಕಾಶ್, ಜಿಲ್ಲಾ ಪಂಚಾಯತ್ ಸದಸ್ಯ ಹನುಮೇಗೌಡ, ತಾಲ್ಲೂಕು ಪಂಚಾಯತ್ ಸದಸ್ಯ ಸುರೇಂದ್ರ, ಜಿಲ್ಲಾ ಜೆಡಿಎಸ್ ವಕ್ತಾರ ರಘು ಭಾಗವಹಿ ಸುವರು. ಹೊಸೂರಿನ ಶ್ರೀ ಗಿರಿ ಕ್ಷೇತ್ರದ ಶ್ರೀ ಉಮೇಶ್ ಗುರೂಜಿ, ಕಾಮೇನಹಳ್ಳಿಯ ಅಯ್ಯಣ್ಣ, ಮರಿಯಪ್ಪ ಹಾಗು ರವಿಶಂಕರ್ ಉಪಸ್ಥಿತರಿರುವರು.



ಶ್ರೀ ಲಕ್ಷ್ಮಿನರಸಿಂಹ ವಿದ್ಯಾಮಂದಿರ ಶಾಲೆಯಲ್ಲಿ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಹೆಚ್ .ಎನ್ . ಸತ್ಯನಾರಾಯಣ ರಾವ ನಿವೃತ್ತ ಪ್ರೌಢಶಾಲಾ ಶಿಕ್ಷಕರು ಉದ್ಘಾಟಿಸಿ ಮಕ್ಕಳಿಗೆ ಹಿತವಚನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲಕ್ಷ್ಮಿ ನರಸಿಂಹ ಸಂಸ್ಥೆಯ ಕಾರ್ಯದರ್ಶಿ ಹೊ.ಸು.ರಮೇಶ ವಹಿಸಿದ್ದರು. ಪ್ರದರ್ಶನದಲ್ಲಿ ವೇದಗಣಿತ, ವಿಜ್ಞಾನ, ಗಣಿತ, ಕಲಾ, ಭಾಷೆಗಳು ಹಾಗೂ ಸಾಂಸ್ಕೃತಿಕ ವಿಚಾರಗಳ ಕುರಿತು ಮಾದರಿಗಳು, ಪ್ರಾತ್ಯಕ್ಷಿಕೆ ಫಲಕಗಳನ್ನು ಪ್ರದರ್ಶಿಸಲಾಯಿತು.

ನುಗ್ಗೇಹಳ್ಳಿ ಕಲ್ಯಾಣಿ ಆಂಜನೇಯಸ್ವಾಮಿ ಸೇವಾಸಮಿತಿ ಸದಸ್ಯರುಗಳು ಶಿವರಾತ್ರಿ ಪ್ರಯುಕ್ತ 8ನೇ ಬಾರಿ ಧರ್ಮಸ್ಥಳದ ಶ್ರೀ ಮಂಜುನಾಥಸ್ವಾಮಿ ದರ್ಶನಕ್ಕೆ ಪಾದಯಾತ್ರೆ ಹೊರಟರು.

ಈ ಸಂದರ್ಭದಲ್ಲಿ ರಾಜಣ್ಣ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಗಿರಿಜಾಚಂದ್ರು, ಭಾಗ್ಯ, ಗಿರೀಶ್ ಇತರರು ಇದ್ದರು.



ಕೇರಳಾಪುರ ಮುಂತಾದ ಕಡೆಗಳಿಂದ ಬಂದ ಧರ್ಮಸ್ಥಳದ ಪಾದಯಾತ್ರೆಯ ಭಕ್ತರು ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಧರ್ಮಸ್ಥಳಕ್ಕೆ ಹೊರಟರು.